ಅಲ್ವಾ ಅತ್ತೇ? ಒಂದು ಊರುಗೋಲು ತಾನೆ? ಕಿಟ್ಟು ಅರ್ಧ ಗಂಟೆಯಲ್ಲಿ ಮಾಡಿಕೊಡುತ್ತಾನೆ'' ಅವರನ್ನು ಸಮಾಧಾನಿಸುವಂತೆ ಮೆತ್ತಗಿನ ಸ್ವರದಲ್ಲಿ ಹೇಳಿದಳು. ಅವಳತ್ತೆ ಅಲ್ಲೇ ಮಂಚದ ಬದಿಯಲ್ಲಿ ಸುಸ್ತಾದವರಂತೆ ಕುಳಿತರು.

''ಬರೇ ಬಿದಿರಾದರೆ ಪರವಾಗಿರಲಿಲ್ಲ ಬಿಡು. ಆದರೆ, ಇದು ಹಾಗಲ್ಲವಲ್ಲ...'' ಅವರು ಹೇಳುತ್ತಲೇ ಕಣ್ಣು ಮುಚ್ಚಿಕೊಂಡರು. ಅವರ ಕಣ್ಣಂಚಿನಿಂದ ಎರಡು ಹನಿ ನೀರು ಮೆಲ್ಲ ಮೆಲ್ಲಗೆ ಹೊರಗಿಣುಕಿತು. ರುಕ್ಮಿಣಿಗೆ ಒಮ್ಮೆಗೆ ಅವರ ಸ್ಥಿತಿ ನೋಡಿ ಗಾಬರಿಯಾಯಿತು. ಮೆಲ್ಲಗೆ ಅವರ ಹತ್ತಿರ ಸರಿದು ಕಕ್ಕುಲತೆಯಿಂದ ಕೇಳಿದಳು,

''ಏನತ್ತೆ? ಅಂಥದ್ದೇನಿದೆ ಅದರಲ್ಲಿ? ನಿನ್ನೆಯಿಂದ ಮಾವನ ತಳಮಳ ನೋಡಿ ನನಗೂ ಏನೋ ಇದೆ ಅಂತ ಅನ್ನಿಸಿತ್ತು. ನಿಮ್ಮಲ್ಲೇ ಕೇಳೋಣ ಅಂತ ಅಂದ್ಕೊಂಡಿದ್ದೆ. ಏನೋ ಕುತೂಹಲ ಅತ್ತೇ. ನನಗೆ ಹೇಳಬಹುದಾದರೆ ಹೇಳಿ'' ಅವಳು ಅವರಿಗೆ ಒತ್ತಿಕೊಂಡು ಕುಳಿತಳು. ಆ ಹಿರಿಜೀವ ಒಮ್ಮೆ ನಿಟ್ಟುಸಿರು ಬಿಟ್ಟಿತು. ಬಹುಶಃ ಅವರಿಗೂ ಮನಸ್ಸಿನ ಭಾರ ಇಳಿಸಿಕೊಳ್ಳಬೇಕು ಎನ್ನಿಸಿರಬೇಕು. ಮೆತ್ತಗೆ ಮಾತನಾಡತೊಡಗಿದರು.

''ಅದೊಂದು ದೊಡ್ಡ ಕತೆ. ನಾನು ದೊಡ್ಡ ಮಗನನ್ನು ಹೆತ್ತಾಗ ಬರೇ ಹದಿನಾರರ ಹುಡುಗಿ. ನನಗೂ ಅಮ್ಮನಾಗುವ ಪ್ರೌಢತೆ ಬಂದಿರಲಿಲ್ಲ. ಮದುವೆಯಾಗಿದೆ ಎನ್ನುವುದೇ ಅಲ್ಲವೇ ತಾಯಿ ಆಗಬಹುದೆನ್ನುವುದಕ್ಕೆ ಸಮಾಜ ಹೆಸರಿಸುವ ಅರ್ಹತೆ! ಒಳ್ಳೆಯ ಸ್ಥಿತಿವಂತರ ಸಂಬಂಧ, ಸಾಲಾಗಿ ಮೂರು ಮಂದಿ ತಂಗಿಯಂದಿರು. ಇದೆಲ್ಲಾ ನನ್ನ ವಯಸ್ಸನ್ನು, ಪ್ರಬುದ್ಧತೆಯನ್ನು ಹಿಗ್ಗಿಸಿ, ಹಿರಿದು ಮಾಡಿ ಹಸೆಮಣೆಗೇರಿಸಿದ್ದು. ಇಲ್ಲಿ ಮನೆ ತುಂಬಾ ಜನರು ಇದ್ದ ಕಾರಣಕ್ಕೇ ಏನೋ ಮಗುವಿನ ಹೊಣೆಗಾರಿಕೆಯೂ ನನಗೆ ಕಡಿಮೆಯೇ. ಅದೊಂದು ಕೆಟ್ಟದಿನ ನಮ್ಮ ಬದುಕಲ್ಲಿ. ಹಿಂದಿನ ರಾತ್ರಿ ಪೂರ್ತಿ ಮಗು ನಿದ್ದೆ ಮಾಡದೇ ರಚ್ಚೆ ಹಿಡಿದು ಅತ್ತು ನನಗೆ ನಿದ್ದೆ ಮಾಡಲೇ ಬಿಟ್ಟಿರಲಿಲ್ಲ. ಬೆಳಗ್ಗೆ ಸ್ನಾನ ಮಾಡಿಸಿದ ಕೂಡಲೇ ಹಾಲು ಕುಡಿದು ನಿದ್ದೆ ಹೋದ. ನಾನು ದಣಿದಿದ್ದೆ ಎನ್ನುವುದಕ್ಕಿಂತ ಮನೆಯಿಂದ ಹೊರಬಂದು ಒಮ್ಮೆ ಮನಸ್ಸನ್ನು ನಿರಾಳವಾಗಿಸಬೇಕು ಎಂಬ ಆತುರವಿತ್ತು. ಮನೆಯಲ್ಲಿ ಇವರು ಬೇರೆ ಬಿಡುವಾಗಿ ಇದ್ದರು. ಮಗು ಎದ್ದರೆ ನೋಡಿಕೊಳ್ಳುತ್ತಾರೆ ಎಂದುಕೊಂಡೆ. ನಮ್ಮದೇ ಮನೆಯ, ನನ್ನದೇ ವಯಸ್ಸಿನ ಮಕ್ಕಳ ಜೊತೆ ಹೊರಗೆ ಬಯಲಲ್ಲಿ ಏನೋ ಮಕ್ಕಳಾಟ ಆಡುವುದಕ್ಕೆ ಹೋದೆ. ಆಟದ ಗುಂಗಿನಲ್ಲಿ ಮಗು ಎದ್ದು ಅಳುವುದು ಕೇಳಿಸಲಿಲ್ಲ. ಇವರು ನಾನೇ ಬಂದು ಎತ್ತಿಕೊಳ್ಳಲಿ ಎಂದು ಸುಮ್ಮನೆ ಕುಳಿತರು. ಪಾಪ ಮಗು ಅತ್ತೂ ಅತ್ತೂ ಮೆಲ್ಲ ತೊಟ್ಟಿಲ ಬದಿಯನ್ನು ಹಿಡಿದು ಏಳುವುದಕ್ಕೆ ಪ್ರಯತ್ನಿಸಿತ್ತು. ಮೇಲೆ ಕಟ್ಟಿದ ಸಂಕೋಲೆ ಜಾರಿ ತೊಟ್ಟಿಲು ವಾಲಿತು. ಮಗು ಒಮ್ಮೆಗೆ ನೆಲಕ್ಕೆ ಬಿದ್ದಿತ್ತು. ತೊಟ್ಟಿಲು ನೆಲಕ್ಕೆ ಅಪ್ಪಳಿಸಿದ ಸದ್ದಿಗೆ ಮನೆಮಂದಿಯೆಲ್ಲಾ ಓಡಿ ಬಂದು ಸೇರಿದ್ದರು. ಮಗುವಿನ ಬಾಯಿ ಮೂಗಲ್ಲಿ ರಕ್ತ. ಎಲ್ಲರಿಗೂ ಗಾಬರಿ. ತಕ್ಷಣ ನಮ್ಮೂರಿನ ನಾಟಿ ವೈದ್ಯರನ್ನು ಬರಹೇಳಿ ಚಿಕಿತ್ಸೆ ನಡೆಸಿದರು. ಹೊರಗೆ ದೊಡ್ಡದೇನು ಕಾಣದಿದ್ದರೂ ಎಳೆಯ ಕಂದನ ತಲೆಗೆ ದೊಡ್ಡ ಏಟೇ ಬಿದ್ದಿರಬೇಕು. ಇಷ್ಟೆಲ್ಲಾ ಆದರೂ ನನಗೆ ಮತ್ತು ನನ್ನ ಜೊತೆಯಲ್ಲಿದ್ದವರಿಗೆ ಈ ವಿಷಯ ಗೊತ್ತೇ ಆಗಿರಲಿಲ್ಲ. ನಾನು ಅಂದಿನ ಪಂದ್ಯದಲ್ಲಿ ಗೆದ್ದ ಖುಷಿಗೆ ಕುಣಿಯುತ್ತಲೇ ಮನೆಯ ಒಳಗೆ ಬಂದಿದ್ದೆ. ಎಲ್ಲರ ಉರಿಗಣ್ಣು ನನ್ನ ಮೇಲೆ. ನಾನು ಯಾವುದನ್ನೂ ಗಮನಿಸಲೇ ಇಲ್ಲ. ದೊಡ್ಡ ಸದ್ದಿನ ಹೆಜ್ಜೆ ಹಾಕಿದ್ದೆ.

''ಇವಳೇ ಸಾಕಿತ್ತು ಅಲ್ವಾ ನಿನಗೆ? ಇನ್ನು ಮಗು ಬೇರೆ ಕೇಡು, ಯಾಕೆ ಬೇಕಿತ್ತು'' ನನ್ನತ್ತೆಯ ಅಸಹನೆಯ ನುಡಿಗೆ ನನ್ನವರ ಅಷ್ಟು ಹೊತ್ತು ಕಟ್ಟಿಟ್ಟ ಕೋಪ ಕುದಿದು ಒಮ್ಮೆಗೆ ಹೊರ ಹಾರಿತು.

ಮಗುವಿನ ಗಾಯ, ಅಳು ಒಂದೆಡೆಯಾದರೆ, ಎಲ್ಲರ ಚುಚ್ಚು ಮಾತುಗಳಿಂದ ನನ್ನ ಗಂಡ ಬುದ್ಧಿ